MYSORE LEGISLATURE.

PROCEEDINGS OF THE MEETING OF

# THE COMMITTEE ON THE WELFARE OF SCHEDULED CASTES AND SCHEDULED TRIBES

*10th December 1969.*

MYSORE LEGISLATURE SECRETARIAT, BANGALORE

Y5927:1:7.224,dN7:1
K9
132496

BANGALORE.
THE DIRECTOR OF PRINTING, STATIONERY AND
.ICATIONS AT THE GOVERNMENT PRESS
1970

**PROCEEDINGS OF THE INAUGURAL MEETING OF THE COMMITTEE ON THE WELFARE OF SCHEDULED CASTES AND SCHEDULED TRIBES HELD ON WEDNESDAY, THE 10TH DECEMBER 1969, AT 3-00 p.m. IN THE COMMITTEE ROOM, ROOM No. 118, FIRST FLOOR, VIDHANA SOUDHA, BANGALORE.**

---

## Members Present

*Sriyuths*—

1. B. Basavaiah (*Chairman*)
2. M. H. Jayaprakash Narayan
3. G. Duggappa
4. V. S. Hiregoudar
5. Tejsingh Rathod
6. H. D. Deve Gowda
7. K. Prabhakar
8. I. Somasekharappa

INVITEES: 1. Hon'ble Chief Minister of Mysore, Bangalore.

2. Hon'ble Minister for Agriculture.

## Legislature Secretariat

Sri Te. Hanumanthappa, Secretary, Mysore Legislature.

Sri K. S. Thimmappa Gowda, Joint Secretary, Mysore Legislature.

Sri C. S. Sreedhara Murthy, Under Secretary (General), Mysore Legislature.

## Social Welfare Department

Sri G. V. K. Rao, Development Commissioner.

Sri Lakshman Rao, Director for Social Welfare.

ಶ್ರೀ ಬಿ. ಬಸವಯ್ಯ (ಚೇರಮನ್).—ಸ್ವಾಮಿ, ನಮ್ಮ ಶಾಸನ ಸಭಾಧ್ಯಕ್ಷರಾದ ಶ್ರೀಮಾನ್ ಕೊಠಾವಳೆ ಅವರು ಮತ್ತು ನಮ್ಮ ರಾಜ್ಯದ ನೆಚ್ಚಿನ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲ್‌ಅವರು ಈ ಸಮಿತಿಯ ಸಭೆಗೆ ಈ ದಿವಸ ಬಂದಿರುವುದು ಬಹಳ ಸಂತೋಷವಾಗಿದೆ. ಹರಿಜನರ ಕಲ್ಯಾಣದ ವಿಷಯದಲ್ಲಿ ಅವರಿಗೆ ಕಳಕಳಿ ಇರುವುದರಿಂದ ಮಹಾ ಸಭೆಗೆ ಅವರು ಬಂದಿದ್ದಾರೆ. ನಮ್ಮ ದೇಶದಲ್ಲಿ ಪ್ರಥಮವಾಗಿ ಇಂಥ ಸಮಿತಿ ನೇಮಕವಾಗಿರುವುದು ನಮ್ಮ ಮೈಸೂರು ರಾಜ್ಯ ಸರಕಾರದಿಂದ. ಈ ಕಮಿಟಿಯ ಪರವಾಗಿ ನಮ್ಮ ರಾಜ್ಯದ ಜನಗಳ ಪರವಾಗಿ ಶಾಸನ ಸಭೆಯ ಮಾನ್ಯ ಸಭಾಧ್ಯಕ್ಷರಿಗೆ ಮತ್ತು ನಮ್ಮ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೃತ್ಪೂರ್ವಕವಾಗಿ ವಂದನೆಗಳನ್ನು ಅರ್ಪಿಸುತ್ತೇನೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಾಲಾವಕಾಶವಿಲ್ಲದಿದ್ದರೂ ಕೂಡ ಈ ಸಮಿತಿಯ ಸಭೆಗೆ ಹದಿನೈದು ನಿಮಿಷವಾದರೂ ಅಭಿಮಾನದಿಂದ ಬಂದಿರುವುದರಿಂದ ನಮ್ಮ ರಾಜ್ಯದಲ್ಲಿ ಈ ವಿಷಯದ ಬಗ್ಗೆ ಅವರಿಗೆ ಎಷ್ಟರಮಟ್ಟಿಗೆ ಸಹಾನುಭೂತಿ ಇಟ್ಟುಕೊಂಡಿದ್ದಾರೆ ಸಹಕಾರ ಕೊಡುತ್ತಾರೆ ಎನ್ನತಕ್ಕಂಥಾದ್ದು ಇದರಿಂದ ವ್ಯಕ್ತವಾಗುತ್ತದೆ. ತಾವು ಕೊಡತಕ್ಕಂಥ ಸಹಕಾರ ಮತ್ತು ಮಾರ್ಗದರ್ಶನದಿಂದ ಈ ಸಮಿತಿಯ ಕಾರ್ಯ ಕಲಾಪಗಳು ಸುಗಮವಾಗಿ ಸುಸೂತ್ರವಾಗಿ ನಡೆದುಕೊಂಡು ಬಂದು ಹರಿಜನರ ಕಲ್ಯಾಣ ಸಾಧನೆಯ ಉದ್ದೇಶದಿಂದ ಇಲ್ಲಿಗೆ ಈಗ ದಯಮಾಡಿಸಿರತಕ್ಕಂಥ ಇಬ್ಬರಿಗೂ ಸಮಿತಿಯ ಪರವಾಗಿ ಸ್ವಾಗತ ಬಯಸುತ್ತೇನೆ.

## INAUGURAL ADDRESS BY THE HON. SPEAKER, MYSORE LEGISLATIVE ASSEMBLY

Mr. Chairman, Hon. Members of the Committee and the Hon. Chief Minister:

It gives me extremely a great pleasure to inaugurate the Committee on Scheduled Castes and Scheduled Tribes to-day. This Committee has to function for the well-being of the weaker sections of the people. The importance of this committee could be gauged by the fact that the Hon. Chief Minister inspite of his multifarious engagements has made it convenient to participate in the inaugural function. As far as I know, Mysore State is first in India to constitute this committee. This is a pioneer effort by the State of Mysore.

The hon. members know that during the last session of the Assembly and the Council the Rules of procedure were amended to exclude certain portions of functions of the Public Accounts Committee and the Estimates Committee, in order to facilitate the creation of this committee and another committee called the Committee on Public Undertakings. Now this committee has been constituted under

rule 267 E of the Rules of Procedure. The functions of the Committee are to review the progress and implementation of the welfare programmes and other ameliorative measures as also constitutional safeguards for Scheduled Castes/ Scheduled Tribes; and to suggest ways and means of realising the objective of Government policy to bring about improvement in the conditions of these classes in the shortest possible time. These are the objectives of this committee.

The hon. members know that the functions of this committee are two-fold. In the first instance it has to consider the constitutional safeguards which have been provided in the Constitution for the weaker sections of the community and to devise ways to uplift them to the level of other sections of the community. You could find the constitutional safeguards under various articles of the constitution, *viz.*, articles 15, 16, 17, 19, 23, 25, 29, 38, 46, 164, 244, 275, 320, 330, 331, 332, 333, 334, 335, 338, 339, 341, and 342. I think it would be the responsibility of the hon. members of this committee to go through these articles and find out the implications with a view to protect the safeguards afforded by the Constitution of India to the Scheduled Castes and Scheduled Tribes etc. I hope you will do it.

The second item of work which is more important one is to promote the welfare schemes. Hon. Members are aware that in addition to the provisions made in the budget generally for the welfare of the entire community, special provisions have been made from year to year to advance the welfare activities in respect of the weaker sections of the people. For instance, there are special facilities provided or offered to the Members of the Scheduled Castes and Scheduled Tribes in the field of Education, Employment, Co-operative Housing Schemes and various other fields. I think it should be the honest endeavour of this committee to examine all those matters and see that these welfare schemes are implemented by the Government. It has been our experience that even the budgetted allotments for welfare schemes are not utilised to the fullest extent; there

may be some difficulties. It should be the duty of the hon. members of the committee to go into the reasons for not utilising the budgetted amounts and find out whether there are difficulties or bottlenecks and if there are any bottlenecks how to rectify them. You have to consider all these things. For this purpose you have got to undertake a study. For the purpose of study, I might indicate to you a few sources of information to which, of course, your attention is needed. There are twenty-two articles in the Constitution dealing with the safeguards provided to scheduled castes and scheduled tribes. In addition there are reports of the Commissioner of Scheduled Castes and Scheduled Tribes. The Commissioner who is appointed by the President of India reviews the progress made throughout India in each State and finds out to what extent the safeguards guaranteed are carried out and how they are working and how far the schemes are implemented. These reports are available and I request the members to go through these reports and keep themselves appraised of the latest developments with regard to the activities of the Government in this context. Secondly the State Government from time to time issues certain pamphlets and booklets. That also gives considerable information regarding the activities within the limits of the State. The work relating to the scheduled castes and scheduled tribes extends to all the departments of the Government and therefore yours will be a sort of co-ordinating committee to co-ordinate the activities of all the departments of the government with reference to the welfare of Harijans. The hon. Chief Minister is taking keen interest and I hope the departments of the Government will extend to you all co-operation. There are a number of private institutions engaged in the amelioration of Scheduled Castes and Scheduled Tribes. You will be profited by the practical experience they have gained and you can see what they have done. You are well advised to look into the activities of these private institutions and that will be a source of information to you also. Therefore unless you put your hearts and soul into this work it will be difficult for the committee to do any real work. These are the materials which you will have to use.

This problem of upliftment of weaker Section of the public has to be met in an integrated manner. For historic reasons the Scheduled Castes and Tribes have remained backward and that situation will have to be removed. To do that, an integrated approach is necessary, and co-operation of the people placed in a fortunate position, is necessary. It shall be the endeavour of all to find out ways and means to remove the disparities now existing. In this connection I would like to read one or two paras from the Report of the Commissioner of Scheduled Castes and Scheduled Tribes for 1966-67. On page 8 and 9 he says:

> "It is necessary at this stage to draw particular attention to two points connected with the welfare of the Backward Classes. Through a special concern for the welfare of the Scheduled Tribes, for example, a view has wrongly grown up in some quarters that all members of the Scheduled Tribes form and exploite class while all plainsmen are their exploiters. This overlooks the fact that the plainsmen themselves may be divided into exploiters and exploited, while similar divisions may also exist among the tribal communities. An exlcusive concern for the unprivileged of one particular community may encourage the unwary to develop a defensive attitude which may eventually lead to a feeling of exclusiveness and even conflict with the rest. If it is one's purpose to bring about an end of exploitation altogether, the very best course would be to work for the sake of all those who suffer from similar disabilities, no matter to what caste or tribe they belong. But with the resources at our command, we can certainly begin with the education and organisation of the Scheduled Castes and Scheduled Tribes, but also take adequate care that this does not give rise to a new kind of communal exclusiveness. One should not forget that there are poor people belonging to other

castes also who may deserve as much care as the Scheduled Communities.

The second point to which attention has to be drawn is that a particular community should not be regarded as an undifferentiated whole, and therefore subjected to the same kind of programme of development. Let me explain this by means of two specific examples."

These are some of the points which I want to place before you. I request you to go through all these reports and find out what portion of recommendations will be helpful to you so far as programmes in Mysore are concerned. Sometimes it so happens that assistance given to the members of the scheduled castes is not utilised for the purpose it is given. It should be your endeavour to see that the aid and assistance extended to the poorer sections who are unfortunate members of our society, are utilised for the purpose it is meant. Coming from various parts of the State, you will be touring these areas for the purpose of finding out as to whether such things occur. That should not happen. There are special provisions for the welfare of Scheduled Castes and Scheduled Tribes. But the general provisions also are there along with other members of the society and they are entitled to their share also in the general funds alloted for the welfare of the entire society. You should also endeavour in that context to see whether their share of the general funds also reach or do not reach these poor people. Therefore, I am sure that with all sincerity at your command you will be looking to the welfare of these people and help them to the extent possible.

I would like to sound a note of warning here. After careful studies and deliberations you will be coming to certain conclusions and making certain recommendations. Your recommendations should be realistic and should be within the realm of possibility and practicability. I hope you will take note of this while making your recommendations so that the Government and the Legislature also will be in a position to implement the recommendations.

I am very grateful to the Chairman and members of the Committee for giving me an opportunity to come before you and say a few words about the functions of the Committee. I do not know whether what all I said is useful to you. If anything of what I said is not useful to the Committee you may not take note of it. I thank you for the honour done to me by asking me to inaugurate this Committee.

I thank the Chief Minister also for coming here to show his sense of participation in the activities of this Committee.

ಶ್ರೀ ವೀರೇಂದ್ರ ಪಾಟೀಲ್ (ಮಾನ್ಯ ಮುಖ್ಯ ಮಂತ್ರಿಯವರು).—ಶಾಸನಸಭಾಧ್ಯಕ್ಷರಾದ ಶ್ರೀಮಾನ್ ಕೊಠಾವಳೆಯವರೇ, ಈ ಸಮಿತಿಯ ಅಧ್ಯಕ್ಷರಾದ ಶ್ರೀಮಾನ್ ಬಸವಯ್ಯನವರೇ, ಮತ್ತು ಸ್ನೇಹಿತರೇ ಮೈಸೂರು ಲೆಜಿಸ್ಲೇಚರಿನ ಇತಿಹಾಸದಲ್ಲೇ ಇವತ್ತಿನ ದಿವಸ ಒಂದು ಮಹತ್ವದ ದಿನವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ತರದ ಸಮಿತಿ ಒಂದೆಂದೂ ಅಸ್ತಿತ್ವದಲ್ಲಿ ಬಂದಿರಲಿಲ್ಲ. ಹೊಸದಾಗಿ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರನ್ನೊಳಗೊಂಡು ಈ ತರದ ಒಂದು ಸಮಿತಿಯನ್ನು ನೇಮಿಸಬೇಕೆಂದು ಸರ್ಕಾರದವರು ಮನಸ್ಸು ಮಾಡಿ ಈ ಒಂದು ಸಮಿತಿಯು ಅಸ್ತಿತ್ವದಲ್ಲಿ ಬಂದಿದೆ. ತಮಗೆಲ್ಲಾ ಗೊತ್ತಿರಬಹುದು — ಈ ತರದ ಸಮಿತಿಯು ಲೋಕಸಭೆಯಲ್ಲೂ ಸುಮಾರು ಒಂದು ವರ್ಷದ ಕೆಳಗೆ, ಮಾಡಿಕೊಂಡಿದ್ದಾರೆ. ಅವರು ಮಾಡಿಕೊಂಡಮೇಲೆ ನಾವೂ ಏಕೆ ಈ ರೀತಿ ಸಮಿತಿಯನ್ನು ಮಾಡಬಾರದು ಎನ್ನುವ ವಿಚಾರ ಕೆಲವು ದಿವಸದಿಂದ ಬರುತ್ತಿತ್ತು. ಲೋಕಸಭೆಯವರು ಇಂಥ ಸಮಿತಿ ಮಾಡಿದಮೇಲೆ ಬಹುಶಃ ನಮ್ಮ ರಾಜ್ಯವೇ ಇದನ್ನು ಮೊದಲ ಸಾರಿ ಮಾಡಿದ್ದೆಂದು ಕಾಣುತ್ತದೆ. ಒಂದು ವೇಳೆ ನಾವು ಮೊದಲನೇ ಬಾರಿ ಈ ರೀತಿಯ ಸಮಿತಿಯನ್ನು ರಚನೆ ಮಾಡಿದ್ದೇ ಆಗಿದ್ದರೆ, ನಾವು ಇತರ ರಾಜ್ಯಗಳಿಗೆ ಮಾರ್ಗದರ್ಶಕರಾಗಿದ್ದೇವೆಂದು ಹೆಮ್ಮೆಪಟ್ಟುಕೊಳ್ಳಬೇಕಾಗಿದೆ. ಈ ರೀತಿಯ ಸಮಿತಿಯನ್ನು ಲೋಕಸಭೆಯಲ್ಲಿ ಮಾಡಿದ್ದಾರೆ, ನಾವೂ ಮಾಡಬೇಕೆನ್ನುವ ಒತ್ತಾಯ ಏನೂ ಇರಲಿಲ್ಲ. ಆದರೂ ಈ ರೀತಿಯ ಸಮಿತಿಯ ಅವಶ್ಯಕತೆ ಕೆಲವು ದಿವಸಗಳಿಂದ ಕಂಡುಬರುತ್ತಿತ್ತು. ಈಗ ಮಾನ್ಯ ಕೊಠಾವಳೆಯವರು, ಈ ಸಮಿತಿ ಯಾವ ರೀತಿ ಕೆಲಸಕಾರ್ಯಗಳನ್ನು ಮಾಡಬೇಕು, ಯಾವ ರೀತಿ ಸಲಹೆಗಳನ್ನು ಮಾಡಬೇಕೆಂಬುದರ ಬಗ್ಗೆ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಅದನ್ನು ಮತ್ತೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರೆ, ಈ ಒಂದು ಸಮಿತಿಯು ಬಹಳ ಮಹತ್ವವುಳ್ಳ ಸಮಿತಿಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಮಿತಿಯು ಬಹಳ ಜವಾಬ್ದಾರಿಯುಳ್ಳದ್ದು ಮತ್ತು ಇದರ ಕೆಲಸಕಾರ್ಯಗಳಿಂದ ಜನತೆಗೆ ಒಳ್ಳೆಯದಾಗಬೇಕು. ಅದಕ್ಕಾಗಿ ಸಮಿತಿಯ ಕೆಲಸಕಾರ್ಯಗಳು ಯಾವ ವಿಧಾನದಲ್ಲಿ ನಡೆಯಬೇಕೆನ್ನುವುದನ್ನು ನೀವು ಮತ್ತು ನಿಮ್ಮ ಅಧ್ಯಕ್ಷರು ಸೇರಿ ವಿಚಾರಮಾಡಬೇಕಾಗಿದೆ. ಮತ್ತು ಈಗಾಗಲೇ ರಚಿತವಾಗಿದ್ದಂಥ ಲೋಕಸಭೆಯ ಸಮಿತಿಯು ಯಾವ ರೀತಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ ಎನ್ನುವುದನ್ನು ಕೂಡ ತಾವು ಅಧ್ಯಯನ ಮಾಡಬೇಕು. ನಿಮಗೆ ಆ ಸಮಿತಿಯ ಕಾರ್ಯಕಲಾಪಗಳಿಂದ ಒಂದು ಮಾರ್ಗದರ್ಶನ ಸಿಗುವುದೆಂದು ನನಗನಿಸುತ್ತದೆ. ನಾನು ಹೇಳುವಾಗೆ ಸಮಿತಿಯು ಜವಾಬ್ದಾರಿ ಬಹಳ ಕಠಿಣತರವಾದುದು ಮತ್ತು ಕೆಲಸ ಬಹಳ ಹೊರೆಯಾದ ಕೆಲಸವಾಗುತ್ತದೆ. ಮುಖ್ಯವಾಗಿ ನಮ್ಮ ಸರ್ಕಾರದಲ್ಲಿರುವಂತಹ ಸೋಷಿಯಲ್ ವೆಲ್‌ಫೇರ್ ಇಲಾಖೆಯು ಒಂದು ವಾಚ್ ಡಾಗ್ ರೀತಿಯಲ್ಲಿ ಈ ಸಮಿತಿ

ಕೆಲಸ ಮಾಡಿದರೆ ನನಗೆ ಬಹಳ ಸಂತೋಷ. ಹರಿಜನ ಗಿರಿಜನ ಮತ್ತು ಹಿಂದುಳಿದ ಸಮಾಜದ ಉದ್ಧಾರಕ್ಕಾಗಿ ಅನೇಕ ಕೆಲಸಗಳಾಗಿವೆ ; ಮತ್ತು ಅನೇಕ ವರ್ಷಗಳ ಯೋಜನೆಗಳು ಕಾರ್ಯಗತವಾಗಿವೆ. ಅವುಗಳು ಯಾವ ಮಟ್ಟದಲ್ಲಿ ಆಗುತ್ತಾ ಇವೆ, ಮತ್ತು ಅವುಗಳಲ್ಲಿ ಏನಾದರೂ ಸುಧಾರಣೆಗಳು ಅವಶ್ಯವಿದೆಯೇ ಎಂಬುದನ್ನು ನೋಡಬೇಕಾಗಿದೆ. ಕೇಂದ್ರ ಸರ್ಕಾರದವರು ಏನು ಯೋಜನೆ ಹಾಕಿಕೊಟ್ಟರೂ, ತಾವು ಅದನ್ನು ದೀರ್ಘವಾಗಿ ವಿಚಾರ ಮಾಡಬೇಕು. ಅವುಗಳಲ್ಲಿ ಕೆಲವು ಯೋಜನೆಗಳು ಪೆಟ್ ವೋಡೆವ್ ಆಗಿರಬಹುದು. ಅಂಥವುಗಳಮೇಲೆ ಹಣ ಖರ್ಚು ಮಾಡುವ ಬದಲು ಬೇರೆ ಇನ್ನಿತರ ಮಹತ್ತರವಾದ ಯೋಜನೆಗಳಿಗೆ ಖರ್ಚುಮಾಡುವಂತೆ ಸಲಹೆಗಳನ್ನು ಕೂಡ ಕೊಡಬಹುದು. ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಸರ್ಕಾರದವರೂ ಅದರ ಬಗ್ಗೆ ಇವ್ಯಾಲ್ಯುವೇಶನ್ ಕೂಡ ಮಾಡುತ್ತಿದ್ದಾರೆ. ಆದರೆ ನೀವು ಮಾಡುವಂತಹ ಇವ್ಯಾಲ್ಯೂವೇಶನ್ನಿಗೆ ಹೆಚ್ಚಿನ ಕಿಮ್ಮತ್ತು ಬರುತ್ತದೆ ಮತ್ತು ಅದು ಹೆಚ್ಚು ರಿಯಾಲಿಸ್ಟಿಕ್ ಇವೆಲ್ಯೂಶನ್ ಆಗುವುದಕ್ಕೆ ಸಾಧ್ಯವಿದೆಯೆಂದು ಹೇಳುತ್ತೇನೆ. ಅನೇಕ ಸಲ ಪೇಪರಿನಲ್ಲಿ ಅನೇಕ ವರದಿಗಳನ್ನು ಯೋಜನೆಗಳ ಇಂಪ್ಲಿಮೆಂಟೇಶನ್ ಬಗ್ಗೆ ಓದುತ್ತೇವೆ. ಅದರಿಂದ ಎಷ್ಟುಮಟ್ಟಿಗೆ ಜನತೆಗೆ ನಿಜವಾದ ಲಾಭ ಆಗುತ್ತದೆಂಬುದನ್ನು ತಿಳಿದುಕೊಳ್ಳಬೇಕಾದರೆ ಅದು ಬಹಳ ಕಷ್ಟದ ಕೆಲಸ ಮತ್ತು ಬಹಳ ಜವಾಬ್ದಾರಿಯುತವಾದ ಕೆಲಸ. ಅದನ್ನು ಬಹಳ ಮಟ್ಟಿಗೆ ನೀವು ಮಾಡಬಲ್ಲಿರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತು ಈ ಒಂದು ಕ್ಷೇತ್ರದಲ್ಲಿ ಕೂಡ ಆಗುವಂತಹ ಎಕ್ಸ್‌ಪ್ಲಾಯ್ಟೇಶನ್, ದುರುಪಯೋಗ, ಮತ್ತು ಇದರಿಂದ ಹರಿಜನ ಗಿರಿಜನ ವ್ಯಕ್ತಿಗಳಿಗೆ ಆಗುವಂತಹ ತೊಂದರೆಗಳನ್ನೆಲ್ಲಾ ನಾವು ಕಾಣುತ್ತಿದ್ದೇವೆ. ಅವುಗಳನ್ನು ನಾವು ಯಾವ ರೀತಿಯಲ್ಲಿ ನಿವಾರಣೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದನ್ನು ತಾವು ಮಾಡಬೇಕು. ಸರ್ಕಾರದ ಯೋಜನೆಗಳು ಇವೆ. ನಾನು ಮುಖ್ಯ ಮಂತ್ರಿಯಾದಮೇಲೆ ಹಿಂದುಳಿದ ವರ್ಗದವರ ಹರಿಜನ ಗಿರಿಜನರ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಹೊಸದಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಬರುತ್ತಿದ್ದೇವೆ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಸರ್ಕಾರದ ನೌಕರಿಗಳಲ್ಲಿ ಹರಿಜನ ಗಿರಿಜನರಿಗೆ 18 ಪರ್ಸೆಂಟ್ ರಿಜರ್ವೇಷನ್ ಅನೇಕ ವರ್ಷಗಳಿಂದ ಇವೆ. ಇದು ಕಾನ್‌ಸ್ಟಿಟ್ಯೂಷನ್‌ನಲ್ಲಿರುವುದು ಎಲ್ಲರಿಗೂ ಗೊತ್ತಿದೆ. ಒಂದು ವಿಷಯ ಬಹಳಮಟ್ಟಿಗೆ ಸತ್ಯಾಂಶ ಇದೆ. ಅದು ಏನೆಂದರೆ ಹರಿಜನ ಗಿರಿಜನರಿಗೆ ಸರ್ಕಾರಿ ನೌಕರಿಯಲ್ಲಿ 18 ಪರ್ಸೆಂಟ್ ರಿಜರ್ವೇಷನ್ ಏನಿದೆ ಅದು ಬಹಳಮಟ್ಟಿಗೆ ಪೇಪರಿನಲ್ಲಿ ಇದೆ. ಇದರಲ್ಲಿಎಷ್ಟು ಜನಗಳಿಗೆ ನೌಕರಿ ಸಿಕ್ಕುತ್ತಾ ಇಲ್ಲ, ಏತಕ್ಕೋಸ್ಕರ ಅವರಿಗೆ ನೌಕರಿ ಸಿಕ್ಕುತ್ತಾ ಇಲ್ಲ ಎಂಬುದನ್ನು ಬಹುಶಃ ವಿಚಾರ ಮಾಡುವುದು ಅವಶ್ಯಕ ಎನಿಸುತ್ತದೆ. ಪೇಪರಿನಲ್ಲೇನೋ ಹರಿಜನ ಗಿರಿಜನರಿಗೆ ಸರ್ಕಾರಿ ನೌಕರಿಯಲ್ಲಿ 18 ಪರ್ಸೆಂಟ್ ರಿಜರ್ವೇಷನ್ ಇದೆ. ಆದರೆ ಯಾವಾಗ ಯಾವ ರೆಕ್ರೂಟ್‌ಮೆಂಟ್ ನೋಡಿದರೂ ಕೂಡ ರಿಜರ್ವೇಷನ್ 10 ಪರ್ಸೆಂಟ್ ಕೂಡ ಬಂದಿರುವುದಿಲ್ಲ. ಕ್ಯಾಂಡಿಡೇಟ್ಸ್ ಬರುವುದಿಲ್ಲ ಏನು ಮಾಡೋಣ ಎಂದು ಹೇಳುತ್ತಾರೆ. ಏತಕ್ಕೋಸ್ಕರ ಈ ರೀತಿ ನಡೆಯುತ್ತದೆ, ಇದರಲ್ಲಿ ಏನಾದರೂ ನಡೆಯುತ್ತದೆಯೇ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಇದಕ್ಕಾಗಿ ಒಂದು ನಿರ್ಣಯ ಮಾಡಿದ್ದೇವೆ. ಮುಂದೆ ಎಲ್ಲಾ ರೆಕ್ರೂಟ್‌ಮೆಂಟಿನಲ್ಲಿಯೂ ಕೂಡ ಒಂದು ಸ್ಕೇಲ್ ಮಾಡಿ ಅವರಿಗೆ ಇಂತಿಷ್ಟು ಕೋಟಾ ಸಿಕ್ಕಬೇಕು ಎಂದು ಮಾಡಿದ್ದೇವೆ. ಇದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ. ಇಂಪ್ಲಿಮೆಂಟ್ ಆಗುತ್ತದೆ, ಏತಕ್ಕೆ ಆಗುವುದಿಲ್ಲ ಎಂಬುದನ್ನು ತಾವು ನೋಡಬೇಕು. ಈಗ ಸರ್ಕಾರದ ಭೂಮಿಯನ್ನು ಹರಿಜನ ಗಿರಿಜನರಿಗೆ ಹಂಚುವ ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಭೂಮಿ ಇದೆಯೆಂದು ಜನಗಳೇನೋ ಅರ್ಜಿಯನ್ನು ಹಾಕುತ್ತಾರೆ. ಕೆಲವು ಸಂದರ್ಭದಲ್ಲಿ ಭೂಮಿ ಇದೆಯೇ ಅಥವಾ ಇಲ್ಲವೇ ಎಂಬುದೂ ಕೂಡ ಗೊತ್ತಿರುವುದಿಲ್ಲ.

ಆದರೆ ಆ ದರಖಾಸ್ತು ಲ್ಯಾಂಡ್ ಕೇಸುಗಳು ತೀರ್ಮಾನವಾಗಬೇಕಾದರೆ 2 ವರ್ಷ, 3 ವರ್ಷ, 4 ವರ್ಷ ಆಗುತ್ತದೆ. ಅದರ ಬಗ್ಗೆ ಜನಗಳೂ ಕೂಡ ನೂರಾರು ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಕೊನೆಗೆ ಅವರಿಗೆ ಭೂಮಿ ಸಿಕ್ಕುವುದಿಲ್ಲ. ಅದರಿಂದ ಅವರು ನಿರಾಶರಾಗುತ್ತಾರೆ. ಅದಕ್ಕೋಸ್ಕರವಾಗಿ ಈಗ ನಾವು ಈ ಭೂಮಿಯನ್ನು ಹಂಚುವುದಕ್ಕೆ ಸಂಬಂಧಪಟ್ಟ ಹಾಗೆ ಅನುಕೂಲವಾಗುವಂತಹ ರೀತಿಯಲ್ಲಿ ಲ್ಯಾಂಡ್ ಗ್ರಾಂಟ್ ರೂಲ್ಸ್ ಅನ್ನು ಬದಲಾವಣೆ ಮಾಡಿದ್ದೇವೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಲ್ಯಾಂಡ್ ಗ್ರಾಂಟ್ ಕಮಿಟಿಯನ್ನು ಮಾಡಬೇಕೆಂದಿದ್ದೇವೆ. ಅದನ್ನು ಮಾಡಿದಮೇಲೆ ಅವರು ಲ್ಯಾಂಡ್ ಗ್ರಾಂಟಿಗೆ ಸಂಬಂಧಪಟ್ಟ ಕೆಲಸಕಾರ್ಯಗಳನ್ನು ಮಾಡುತ್ತಾರೆ. ಈ ಕಮಿಟಿಯವರು ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಕೊಡಬೇಕು. ಯಾವ ಉದ್ದೇಶಕ್ಕಾಗಿ ನಾವು ಈ ಕಮಿಟಿಯನ್ನು ನೇಮಕ ಮಾಡಿದ್ದೇವೋ ಅದರ ಉದ್ದೇಶ ಸಾಧನೆಯಾಗುವಂತಹ ಪ್ರಯತ್ನದಲ್ಲಿ ತಾವೆಲ್ಲರೂ ಸಹಕಾರ ಮಾಡಬೇಕು ಎಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಈ ವಿಚಾರದಲ್ಲಿ ನಾನು ವಿಶೇಷವಾಗಿ ಹೇಳಬೇಕಾಗಿಲ್ಲ. ತಾವೆಲ್ಲರೂ ಜವಾಬ್ದಾರಿ ಸ್ಥಾನದಲ್ಲಿದ್ದೀರಿ. ಸಮಾಜದಲ್ಲಿ ಹರಿಜನ ಗಿರಿಜನರು ಮುಂದೆ ಬರಬೇಕು. ಅಸ್ಪೃಶ್ಯತೆ ನಿವಾರಣೆಯಾಗಬೇಕು. ಇದರ ಹಿನ್ನೆಲೆಯಲ್ಲಿ ಈ ಕಮಿಟಿಯು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮೊದಲು ಲೋಕಸಭೆಯಲ್ಲಿ ಇಂಥಾದ್ದೇ ಒಂದು ಕಮಿಟಿಯನ್ನು ನೇಮಕ ಮಾಡಿ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಹೆಚ್ಚು ಶ್ರಮಪಟ್ಟು ಕೆಲಸ ಮಾಡುತ್ತಿದ್ದಾರೆ. ಅದೇ ತರಹ ನಮ್ಮ ರಾಜ್ಯದಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿ ಅವರ ಸಲಹೆಗಳನ್ನು ತೆಗೆದುಕೊಂಡು ಹಿಂದುಳಿದವರ್ಗದವರ ಮತ್ತು ಹರಿಜನ ಗಿರಿಜನರ ಅಭಿವೃದ್ಧಿಯನ್ನು ಸಾಧನೆ ಮಾಡುವುದಾದರೆ ಅವರು ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಉದ್ದೇಶದಿಂದ ಈ ಕಮಿಟಿಯನ್ನು ನೇಮಕ ಮಾಡಿದೆ. ಇದು ಒಂದು ಪುಣ್ಯ ಕಾರ್ಯಕ್ಷೇತ್ರ. ಸದ್ಭಾವನೆಯಿಂದ ದುಡಿಯುವುದಕ್ಕೆ ಈಗ ಒಂದು ಅವಕಾಶ ಸಿಕ್ಕಿದೆ. ಆದ್ದರಿಂದ ಈ ಒಂದು ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುವ ಹಾಗೆ ತಾವು ಸಹಕಾರ ಕೊಡಬೇಕು. ಇದಕ್ಕೆ ನಾನು ನನ್ನ ಸಂಪೂರ್ಣ ಸಹಕಾರ ಕೊಡುತ್ತೇನೆ ಎನ್ನುವ ಭರವಸೆಯನ್ನು ನಾನು ಕೊಡುತ್ತೇನೆ. ಈ ಕಮಿಟಿಯವರು ಏನಾದರೂ ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ, ನೋಡಿಕೊಂಡು ಬರುವುದಕ್ಕೆ ಎಲ್ಲಿಗಾದರೂ ಹೋಗಬೇಕಾಗುತ್ತದೆ. ಅದಕ್ಕೆ ಯಾವ ಅಡ್ಡಿ ಆತಂಕವನ್ನೂ ನಾನು ಉಂಟುಮಾಡುವುದಿಲ್ಲ. ಈ ಕಮಿಟಿಯ ಕೆಲಸ ಸುಗಮವಾಗಿ ನಡೆಯುವುದಕ್ಕೆ, ಕೆಲಸ ಮಾಡುವುದಕ್ಕೆ ಏನು ಬೇಕೋ ಅದನ್ನು ಒದಗಿಸುವುದಕ್ಕೆ ನಾನು ಹಿಂದುಮುಂದು ನೋಡುವುದಿಲ್ಲ. ಈ ಕಮಿಟಿಯ ಅಧ್ಯಕ್ಷರಾದ ಶ್ರೀಮಾನ್ ಬಸವಯ್ಯನವರು ಈ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ದುಡಿಯುತ್ತಿದ್ದಾರೆ. ಎಲ್ಲರೂ ಕಳಕಳಿಯಿಂದ ಸಂಪೂರ್ಣ ಸಹಕಾರ ನೀಡಿದರೆ ಹೆಚ್ಚಿನ ಸೇವೆಯನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಈ ಕೆಲಸ ಸುಗಮವಾಗಿ ನಡೆದು ಒಳ್ಳೆಯ ರೀತಿಯಿಂದ ಕೆಲಸ ಮಾಡಿ ಹಿಂದುಳಿದ ವರ್ಗದವರ ಮತ್ತು ಹರಿಜನ ಗಿರಿಜನರ ಉದ್ಧಾರವನ್ನು ಮಾಡಿ ಕೀರ್ತಿಯನ್ನು ಪಡೆಯಲಿ ಎಂದು ಹಾರೈಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಮಂತ್ರಿಗಳು).—ಸನ್ಮಾನ್ಯ ವಿಧಾನಸಭೆಯ ಅಧ್ಯಕ್ಷರೇ, ಸಹೋದ್ಯೋಗಿಗಳೇ, ಈ ಸಮಿತಿಯ ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೇ, ಹಾಗೂ ಅಧಿಕಾರಿಗಳೇ, ಮೊಟ್ಟಮೊದಲನೆಯದಾಗಿ ಇಡೀ ಹಿಂದೂಸ್ಥಾನದಲ್ಲಿ ಲೋಕಸಭೆಯಲ್ಲಿ ಇಂಥಾ ಒಂದು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನ ವೆಲ್‌ಫೇರ್ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅಂಥಾದ್ದೇ ಒಂದು ಕಮಿಟಿಯನ್ನು ನಮ್ಮ ರಾಜ್ಯದಲ್ಲಿಯೂ ಸಹ

ನೇಮಕ ಮಾಡುವುದು ಸೂಕ್ತ ಎಂದು ಭಾವಿಸಿ ನಮ್ಮ ರಾಜ್ಯ ಸರ್ಕಾರದವರು ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವೆಲ್‌ಫೇರ್ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದಕ್ಕಾಗಿ ನಾನು ವೈಯ್ಯಕ್ತಿಕವಾಗಿ ಸರ್ಕಾರಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಂಥಾ ಒಂದು ಸಮಿತಿ ನೇಮಕವಾಗಬೇಕು ಎಂದು ಶಾಸನ ಸಭೆಯಲ್ಲಿಯೂ ಹಾಗೂ ಮಂತ್ರಿ ಮಂಡಲದಲ್ಲಿಯೂ ನಾನು ಹತ್ತಾರು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೆ. ಅದು ಈಗ ಕೈಗೂಡಿದೆ. ಹಿಂದುಳಿದ ವರ್ಗದವರ ಮತ್ತು ಹರಿಜನರ ಗಿರಿಜನರ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಮೈಸೂರು ಸರ್ಕಾರ ಒಂದು ಉದಾರ ಭಾವನೆಯನ್ನು ತೋರಿಸಿಕೊಟ್ಟಿದೆ. ಮೈಸೂರು, ಮಹಾರಾಷ್ಟ್ರ ಮುಂತಾದ ಕೆಲವು ರಾಜ್ಯಗಳಲ್ಲಿ ೧೯೬೦ ನೇ ಇಸವಿಯಿಂದಲೂ ಕೂಡ ಹಿಂದುಳಿದ ವರ್ಗದವರ ಮತ್ತು ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಒಂದು ವಿಶಿಷ್ಟ ರೀತಿಯ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಿಕೊಂಡು ಬಂದಿವೆ. ಮತ್ತು ಅವರ ಪ್ರರೋಭಿವೃದ್ಧಿಗಾಗಿ ವಿಶೇಷ ಅಧಿಕಾರಿಗಳನ್ನು ನೇಮಿಸಿ ಕೆಲವಾರು ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ ಕೆಲವಾರು ಪ್ರಗತಿಯನ್ನು ಸರಿಯಾದ ಮಟ್ಟದಲ್ಲಿ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಶಾಸಕರು ಸರ್ಕಾರದವರು ಹರಿಜನ ಗಿರಿಜನರ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಇಂತಿಂಥಾದ್ದಕ್ಕೆ ಅವರಿಗೆ ಹಣವನ್ನು ಕೊಡಬೇಕು ಎಂದು ಮಂಜೂರಾತಿಯನ್ನು ಕೊಡುತ್ತಾರೆ. ಆದರೆ ಅವು ಕಾರ್ಯಗತವಾಗುವ ಸಂದರ್ಭದಲ್ಲಿ ಕೆಲವು ದುರುಪಯೋಗವಾಗುತ್ತವೆ. ಇದರಿಂದಾಗಿ ಅವರ ಅಭಿವೃದ್ಧಿ ಕುಂಠಿತವಾಗುತ್ತದೆ. ಈಗ ಲ್ಯಾಂಡ್ ರೂಲ್ಸ್ ಪ್ರಕಾರ ಸರ್ಕಾರದವರು ಹರಿಜನ ಗಿರಿಜನರಿಗೆ ಎಷ್ಟು ಎಕರೆ ಎಂತಹ ಭೂಮಿಯನ್ನು ಕೊಟ್ಟಿದ್ದಾರೆ ಎನ್ನತಕ್ಕದ್ದನ್ನು ಈ ಸಮಿತಿಯವರು ಪ್ರತ್ಯಕ್ಷವಾಗಿ ನೋಡಬೇಕಾಗುತ್ತದೆ. ಮತ್ತು ಸರ್ಕಾರದವರು ಅವರಿಗೆ ಕೊಟ್ಟಿರುವಂಥಾ ಭೂಮಿಯನ್ನು ಅವರೇ ಇಟ್ಟುಕೊಂಡಿದ್ದಾರೆಯೇ ಅಥವಾ ಪರಭಾರೆ ಮಾಡಿದ್ದಾರೆಯೇ ಎಂಬುದನ್ನೂ ಸಹ ನೋಡುವುದು ನಮ್ಮ ಕರ್ತವ್ಯ. ಹಿಂದೆ ಕೂಡ ಈ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಸರ್ಕಾರ ಏನೇನು ಸೌಲಭ್ಯಗಳನ್ನು ಕೊಟ್ಟಿದೆ ಅದರ ಬಗ್ಗೆ ಯಾವ ಯಾವ ಕಾರ್ಯಕ್ರಮದಲ್ಲಿ ಪ್ರಗತಿಯನ್ನು ಸಾಧಿಸಿದೆ, ಸರ್ಕಾರದವರು ಅವರಿಗೆ ಕೊಟ್ಟ ಸಹಾಯ ಯಾವುಯಾವುದು ಅವರ ಕೈ ಸೇರಿದೆ ಎಂಬುದನ್ನು ನೋಡುವುದು ಅವಶ್ಯಕ. ಸರ್ಕಾರದ ಕಾರ್ಯಕ್ರಮದ ಪ್ರಕಾರ ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಒಂದು ವೇಳೆ ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಅದಕ್ಕೆ ಕಾರಣವೇನು ಎಂಬುದನ್ನೂ ಸಹ ತಿಳಿದುಕೊಳ್ಳುವುದು ಅವಶ್ಯಕ.

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ, ಹಾಸ್ಟಲುಗಳಲ್ಲಿ ಹಿಂದುಳಿದ ಹಾಗೂ ಹರಿಜನ ಗಿರಿಜನ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ, ಕಡಮೆಯಾಗಿದ್ದರೆ ಆ ರೀತಿ ಕಡಮೆಯಾಗುವುದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಾಗಿದೆಯೇ ಅಥವಾ ಕಡಮೆಯಾಗಿದೆಯೇ ಎಂಬುದನ್ನು ನೋಡುವುದು ಅವಶ್ಯಕ. ನಮ್ಮ ರಾಜ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳ ವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನ ಇದ್ದಾರೆ, ಹಿಂದೆ ವೇಕೆನ್ಸಿಗಳನ್ನು ಅಡ್ವರ್ಟೈಜ್ ಮಾಡಿದ್ದಾಗ ಹರಿಜನ ಗಿರಿಜನರ ರಿಜರ್ವೇಷನ್ನಿಗೆ ತಕ್ಕಷ್ಟು ಹುದ್ದೆಗಳಿಗೆ ಸಾಕಷ್ಟು ಅಭ್ಯರ್ಥಿಗಳು ಬಾರದೇ ಇದ್ದರೆ ಅದಕ್ಕೆ ಕಾರಣವೇನು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸನ ಪಂಗಡಕ್ಕೆ ಸೇರಿದ ವಿದ್ಯಾವಂತ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನ ದ್ದಾರೆ. ಎಸ್. ಎಸ್. ಎಲ್. ಸಿ. ಪಾಸಾದವರು, ಬಿ.ಎ., ಬಿ.ಎಸ್‌ಸಿ., ಬಿ.ಇ., ಬಿ.ಎಸ್. ಪಾಸಾಗಿ ಕೆಲಸ ಸಿಕ್ಕದೆ ಇರತಕ್ಕ ನಿರುದ್ಯೋಗಿಗಳು ಎಷ್ಟು ಜನ ಇದ್ದಾರೆ ಅಂಕಿ ಅಂಶಗಳನ್ನು ಈ ಕಮಿಟಿಯವರು ಶೇಖರಣೆ ಮಾಡಿದರೆ ಒಳ್ಳೆಯದು.

ಅವರ ಮನವಿಗಳನ್ನು ಪರಿಶೀಲನೆ ಮಾಡಿ ಅವರಿಗೆ ಈ ಸಮಿತಿಯವರು ಎಷ್ಟುಮಟ್ಟಿನ ಅನುಕೂಲಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದರ ಕಡೆಗೆ ಗಮನ ಕೊಡಬೇಕು. ತಮಗೆಲ್ಲಾ ತಿಳಿದಹಾಗೆ ಈಗ ಸರಕಾರದಲ್ಲಿ ಸುಮಾರು ಏಳು ಸಾವಿರ ಜನರು ಲೋಕಲ್ ಕ್ಯಾಂಡಿಡೇಟುಗಳು ಇದ್ದಾರೆ. ಸರಕಾರ ಇವರನ್ನು ನೇಮಿಸಿಕೊಂಡಿರುವುದರಲ್ಲಿ ಎಷ್ಟು ಜನರ ಹಿಂದುಳಿದ ವರ್ಗಗಳವರು ಇದ್ದಾರೆ ಇದರ ಪ್ರಮಾಣ ಏನಿದೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ಒಂದು ಪಟ್ಟಿ ತಯಾರುಮಾಡಿ ಇವರ ಬಗ್ಗೆ ಯಾವ ರೀತಿ ಅನುಕೂಲ ಮಾಡಿಕೊಡಬಹುದು ಎನ್ನುವುದರ ಬಗ್ಗೆ ಸರಕಾರಕ್ಕೆ ಸೂಕ್ತವಾದ ಶಿಫಾರಸುಗಳನ್ನು ಕಳುಹಿಸಬಹುದು. ಇದರ ಬಗ್ಗೆ ಯಾವ ರೀತಿ ಪರಿಹಾರ ಕೊಡಬಹುದು ಎನ್ನುವುದನ್ನು ಸರಕಾರ ಆನಂತರ ಪರಿಶೀಲನೆ ಮಾಡಲು ಅನುಕೂಲವಾಗುತ್ತದೆ. ಹಾಗೇ ಈ ವರ್ಗದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನರಿದ್ದಾರೆ ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನರಿದ್ದಾರೆ ಇವರುಗಳಿಗೆಲ್ಲಾ ಸರಕಾರ ಯಾವ ರೀತಿ ಸಹಾಯ ಸೌಲಭ್ಯಗಳನ್ನು ಮಾಡಬಹುದು ಎನ್ನುವುದರ ಬಗ್ಗೆ ಈ ಸಮಿತಿಯವರು ಗಮನ ಕೊಡುವುದು ಅಗತ್ಯ. ಈ ಸಮಿತಿಯನ್ನು ನೇಮಕ ಮಾಡಲು ಕಾರಣವೇನು ಎಂದರೆ ಈ ಹಿಂದುಳಿದ ವರ್ಗಗಳವರು ಯಾವ ರೀತಿಯಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಇವರನ್ನು ಯಾವ ರೀತಿಯಾಗಿ ಸುಧಾರಿಸಬಹುದು ಎನ್ನುವುದರ ಬಗ್ಗೆ ಸರಿಯಾದ ಸಲಹೆಗಳನ್ನು ಪಡೆಯಬೇಕೆಂದು ಈ ಸಮಿತಿಯನ್ನು ನೇಮಕಮಾಡಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಇದರಲ್ಲಿ ಇನ್ನೊಂದು ಮುಖ್ಯವಾದ ಪ್ರಶ್ನೆ ಎಂದರೆ ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸ ಪಡೆದ ನಿರುದ್ಯೋಗ ವಿದ್ಯಾರ್ಥಿಗಳು ಇದ್ದಾರೆ. ಮತ್ತು ಪಟ್ಟಣಗಳಲ್ಲಿಯೂ ನಿರುದ್ಯೋಗ ವಿದ್ಯಾವಂತರುಗಳೂ ಇದ್ದಾರೆ. ಇದೊಂದು ದೊಡ್ಡ ಸಮಸ್ಯೆಯೇ ಆಗಿದೆ. ಇವಕ್ಕಾಗಿ ಹಳ್ಳಿಗಾಡಿನಲ್ಲಿರುವವರಿಗೆ ಭೂಮಿಗಳನ್ನು ಕೊಟ್ಟು ಸಹಾಯ ಮಾಡಿದರೆ ಅವರು ಅದರಿಂದ ಉಪಯೋಗ ಪಡೆಯಬಹುದು. ಪಟ್ಟಣಗಳಲ್ಲಿ ಕೆಲವು ಕಡೆ ಇರುವ ಕೈಗಾರಿಕೆ ಕಾರ್ಖಾನೆಗಳಲ್ಲಿ ಸ್ವಲ್ಪ ಜನರಿಗೆ ಕೆಲಸಗಳು ಸಿಕ್ಕಿವೆ ಮತ್ತು ರೋಡು ಟ್ರಾನ್ಸ್‌ಪೋರ್ಟು ಕಾರ್ಪೊರೇಷನ್ ಹಾಗೂ ಇನ್ನಿತರ ಕಡೆಗಳಲ್ಲಿ ಸ್ವಲ್ಪ ಜನಕ್ಕೆ ಕೆಲಸಗಳು ಸಿಕ್ಕಿರಬಹುದು. ಇದರಲ್ಲಿ ಒಂದು ದೊಡ್ಡ ಸಮಸ್ಯೆಯೇ ಬಂದಿದೆ. ಸ್ಕಿಲ್ಡ್ ವರ್ಕರ್ಸ್‌ಗಳು ಹಾಗೂ ಅನ್‌ಸ್ಕಿಲ್ಡ್ ವರ್ಕರುಗಳು ಎಂದು ಕೆಲವು ಕಡೆ ಇರುವ ಕಾರ್ಖಾನೆಗಳಲ್ಲಿ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರೂ ಇನ್ನೂ ಬಹಳ ಜನರು ನಿರುದ್ಯೋಗಿಗಳಾಗಿರುವುದು ನಮಗೆ ಕಂಡುಬರುತ್ತಿದೆ. ಇದು ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಬಗ್ಗೆ ಈ ಸಮಿತಿಯಲ್ಲಿ ಅನುಭವಿಗಳಾದ ಶಾಸಕರು ಇರುವುದರಿಂದ ಇದರ ಬಗ್ಗೆ ಚರ್ಚೆ ಮಾಡಿ ಸೂಕ್ತವಾದ ಶಿಫಾರಸುಗಳನ್ನು ಸರಕಾರಕ್ಕೆ ಕಳುಹಿಸಿಕೊಟ್ಟರೆ ಇದರಮೇಲೆ ಸರಕಾರ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗಬಹುದು ಎಂದು ನಾನು ಭಾವಿಸಿದ್ದೇನೆ. ಇದಕ್ಕಾಗಿ ಈ ಸಮಿತಿಯವರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ರವಾಸಮಾಡಿ ಅಲ್ಲಲ್ಲಿ ಇರುವ ಅಗ್ರಿಕಲ್ಚರಲ್ ಕಾಲೋನಿಗಳು ಹಾಗೂ ಹೌಸಿಂಗು ಕಾಲೋನಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಮತ್ತು ಇಲ್ಲಿನ ಜನರಿಗೆ ಸರಕಾರ ಒದಗಿಸಿರುವ ಸಹಾಯಗಳು ಸರಿಯಾಗಿ ಉಪಯೋಗವಾಗುತ್ತಿವೆಯೋ, ಇಲ್ಲವೆ ಸರಕಾರದಿಂದ ಕೊಟ್ಟ ಸಹಾಯಗಳನ್ನು ದುರುಪಯೋಗಪಡಿಸಿದ್ದಾರೆಯೋ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಸರಕಾರಕ್ಕೆ ಸೂಕ್ತವಾದ ಸಲಹೆಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಸರಕಾರ ಸಮಿತಿಯವರ ವರದಿ ಬಂದಮೇಲೆ ಇವರಮೇಲೆ ಯಾವ ರೀತಿ ಮಾಡಲು ಸಾಧ್ಯ ಎನ್ನುವುದನ್ನು ಯೋಚನೆ ಮಾಡಲು ಅವಕಾಶವಾಗುತ್ತವೆ. ಟಿಬೇಟನ್ ಕಾಲೋನಿಯಲ್ಲಿ ಜಮೀನು ಇಲ್ಲದವರಿಗೆ ಭೂಮಿ ಕೊಟ್ಟು ಯಾವ ರೀತಿ ಅನುಕೂಲಗಳನ್ನು ಸರಕಾರದಿಂದ ಪಡೆಯುತ್ತಿದ್ದಾರೋ ಅದೇ ರೀತಿಯಾಗಿ ಇತರ ಕಡೆಗಳಲ್ಲೂ ಲ್ಯಾಂಡ್‌ಲೆಸ್ ಲೇಬರುಗಳಿಗೆ ಅನುಕೂಲ ಮಾಡಿಕೊಡಬೇಕಾಗಿದೆ

ನೇಮಕ ಮಾಡುವುದು ಸೂಕ್ತ ಎಂದು ಭಾವಿಸಿ ನಮ್ಮ ರಾಜ್ಯ ಸರ್ಕಾರದವರು ಈ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವೆಲ್‌ಫೇರ್ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದಕ್ಕಾಗಿ ನಾನು ವೈಯ್ಯಕ್ತಿಕವಾಗಿ ಸರ್ಕಾರಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಂಥಾ ಒಂದು ಸಮಿತಿ ನೇಮಕವಾಗಬೇಕು ಎಂದು ಶಾಸನ ಸಭೆಯಲ್ಲಿಯೂ ಹಾಗೂ ಮಂತ್ರಿ ಮಂಡಲದಲ್ಲಿಯೂ ನಾನು ಹತ್ತಾರು ವರ್ಷಗಳಿಂದ ಒತ್ತಾಯ ಮಾಡುತ್ತಿದ್ದೆ. ಅದು ಈಗ ಕೈಗೂಡಿದೆ. ಹಿಂದುಳಿದ ವರ್ಗದವರ ಮತ್ತು ಹರಿಜನರ ಗಿರಿಜನರ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ಮೈಸೂರು ಸರ್ಕಾರ ಒಂದು ಉದಾರ ಭಾವನೆಯನ್ನು ತೋರಿಸಿಕೊಟ್ಟಿದೆ. ಮೈಸೂರು, ಮಹಾರಾಷ್ಟ್ರ ಮುಂತಾದ ಕೆಲವು ರಾಜ್ಯಗಳಲ್ಲಿ ೧೯೬೦ ನೇ ಇಸವಿಯಿಂದಲೂ ಕೂಡ ಹಿಂದುಳಿದ ವರ್ಗದವರ ಮತ್ತು ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಒಂದು ವಿಶಿಷ್ಟ ರೀತಿಯ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡಿಕೊಂಡು ಬಂದಿವೆ. ಮತ್ತು ಅವರ ಪ್ರರೋಭಿವೃದ್ಧಿಗಾಗಿ ವಿಶೇಷ ಅಧಿಕಾರಿಗಳನ್ನು ನೇಮಿಸಿ ಕೆಲವಾರು ಪ್ರಗತಿಯನ್ನು ಸಾಧಿಸಿದ್ದಾರೆ. ಆದರೆ ಕೆಲವಾರು ಪ್ರಗತಿಯನ್ನು ಸರಿಯಾದ ಮಟ್ಟದಲ್ಲಿ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಸಾಧಿಸುವುದಕ್ಕೆ ಸಾಧ್ಯವಾಗಿಲ್ಲ. ಶಾಸಕರು ಸರ್ಕಾರದವರು ಹರಿಜನ ಗಿರಿಜನರ ಅಭಿವೃದ್ಧಿಗೆ ಸಂಬಂಧಪಟ್ಟಹಾಗೆ ಇಂತಿಂಥಾದ್ದಕ್ಕೆ ಅವರಿಗೆ ಹಣವನ್ನು ಕೊಡಬೇಕು ಎಂದು ಮಂಜೂರಾತಿಯನ್ನು ಕೊಡುತ್ತಾರೆ. ಆದರೆ ಅವು ಕಾರ್ಯಗತವಾಗುವ ಸಂದರ್ಭದಲ್ಲಿ ಕೆಲವು ದುರುಪಯೋಗವಾಗುತ್ತವೆ. ಇದರಿಂದಾಗಿ ಅವರ ಅಭಿವೃದ್ಧಿ ಕುಂಠಿತವಾಗುತ್ತದೆ. ಈಗ ಲ್ಯಾಂಡ್ ರೂಲ್ಸ್ ಪ್ರಕಾರ ಸರ್ಕಾರದವರು ಹರಿಜನ ಗಿರಿಜನರಿಗೆ ಎಷ್ಟು ಎಕರೆ ಎಂತಹ ಭೂಮಿಯನ್ನು ಕೊಟ್ಟಿದ್ದಾರೆ ಎನ್ನತಕ್ಕದ್ದನ್ನು ಈ ಸಮಿತಿಯವರು ಪ್ರತ್ಯಕ್ಷವಾಗಿ ನೋಡಬೇಕಾಗುತ್ತದೆ. ಮತ್ತು ಸರ್ಕಾರದವರು ಅವರಿಗೆ ಕೊಟ್ಟಿರುವಂಥಾ ಭೂಮಿಯನ್ನು ಅವರೇ ಇಟ್ಟುಕೊಂಡಿದ್ದಾರೆಯೇ ಅಥವಾ ಪರಭಾರೆ ಮಾಡಿದ್ದಾರೆಯೇ ಎಂಬುದನ್ನೂ ಸಹ ನೋಡುವುದು ನಮ್ಮ ಕರ್ತವ್ಯ. ಹಿಂದೆ ಕೂಡ ಈ ಹರಿಜನ ಗಿರಿಜನರ ಅಭಿವೃದ್ಧಿಯ ಬಗ್ಗೆ ಸರ್ಕಾರ ಏನೇನು ಸೌಲಭ್ಯಗಳನ್ನು ಕೊಟ್ಟಿದೆ ಅದರ ಬಗ್ಗೆ ಯಾವ ಯಾವ ಕಾರ್ಯಕ್ರಮದಲ್ಲಿ ಪ್ರಗತಿಯನ್ನು ಸಾಧಿಸಿದೆ, ಸರ್ಕಾರದವರು ಅವರಿಗೆ ಕೊಟ್ಟ ಸಹಾಯ ಯಾವುಯಾವುದು ಅವರ ಕೈ ಸೇರಿದೆ ಎಂಬುವನ್ನು ನೋಡುವುದು ಅವಶ್ಯಕ. ಸರ್ಕಾರದ ಕಾರ್ಯಕ್ರಮದ ಪ್ರಕಾರ ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿದೆಯೇ ಅಥವಾ ಇಲ್ಲವೇ ಒಂದು ವೇಳೆ ಆ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಅದಕ್ಕೆ ಕಾರಣವೇನು ಎಂಬುದನ್ನೂ ಸಹ ತಿಳಿದುಕೊಳ್ಳುವುದು ಅವಶ್ಯಕ.

ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಹಾಗೆ ಸ್ಕೂಲುಗಳಲ್ಲಿ, ಕಾಲೇಜುಗಳಲ್ಲಿ, ಹಾಸ್ಟಲುಗಳಲ್ಲಿ ಹಿಂದುಳಿದ ಹಾಗೂ ಹರಿಜನ ಗಿರಿಜನ ವಿದ್ಯಾರ್ಥಿಗಳ ಸಂಖ್ಯೆ ಕಡಮೆಯಾಗಿದೆಯೇ ಅಥವಾ ಹೆಚ್ಚಾಗಿದೆಯೇ, ಕಡಮೆಯಾಗಿದ್ದರೆ ಆ ರೀತಿ ಕಡಮೆಯಾಗುವುದಕ್ಕೆ ಕಾರಣವೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. ಮತ್ತು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಗುಣಮಟ್ಟ ಹೆಚ್ಚಾಗಿದೆಯೇ ಅಥವಾ ಕಡಮೆಯಾಗಿದೆಯೋ ಎಂಬುದನ್ನು ನೋಡುವುದು ಅವಶ್ಯಕ. ನಮ್ಮ ರಾಜ್ಯದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳ ವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನ ಇದ್ದಾರೆ, ಓಪೆ ವೇಕೆನ್ಸಿಗಳನ್ನು ಅಡ್ವರ್ಟೈಜ್ ಮಾಡಿದ್ದಾಗ ಹರಿಜನ ಗಿರಿಜನರ ರಿಸರ್ವೇಷನ್ನಿಗೆ ತಕ್ಕಷ್ಟು ಹುದ್ದೆಗಳಿಗೆ ಸಾಕಷ್ಟು ಅಭ್ಯರ್ಥಿಗಳು ಬಾರದೇ ಇದ್ದರೆ ಅದಕ್ಕೆ ಕಾರಣವೇನು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸಸ ವರ್ಗಕ್ಕೆ ಸೇರಿದ ವಿದ್ಯಾವಂತ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನ ಇದ್ದಾರೆ. ಎಸ್. ಎಸ್. ಎಲ್. ಸಿ. ಪಾಸಾದವರು, ಬಿ.ಎ., ಬಿ.ಎಸ್‌ಸಿ., ಬಿ.ಇ., ಎಂ.ಬಿ.ಬಿ.ಎಸ್. ಪಾಸಾಗಿ ಕೆಲಸ ಸಿಕ್ಕದೆ ಇರತಕ್ಕ ನಿರುದ್ಯೋಗಿಗಳು ಎಷ್ಟು ಜನ ಇದ್ದಾರೆ ಎನ್ನುವ ಅಂಕಿ ಅಂಶಗಳನ್ನು ಈ ಕಮಿಟಿಯವರು ಶೇಖರಣೆ ಮಾಡಿದರೆ ಒಳ್ಳೆಯದು.

ಅವರ ಮನವಿಗಳನ್ನು ಪರಿಶೀಲನೆ ಮಾಡಿ ಅವರಿಗೆ ಈ ಸಮಿತಿಯವರು ಎಷ್ಟುಮಟ್ಟಿನ ಅನುಕೂಲಗಳನ್ನು ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದರ ಕಡೆಗೆ ಗಮನ ಕೊಡಬೇಕು. ತಮಗೆಲ್ಲಾ ತಿಳಿದಹಾಗೆ ಈಗ ಸರಕಾರದಲ್ಲಿ ಸುಮಾರು ಏಳು ಸಾವಿರ ಜನರು ಲೋಕಲ್ ಕ್ಯಾಂಡಿಡೇಟುಗಳು ಇದ್ದಾರೆ. ಸರಕಾರ ಇವರನ್ನು ನೇಮಿಸಿಕೊಂಡಿರುವುದರಲ್ಲಿ ಎಷ್ಟು ಜನರ ಹಿಂದುಳಿದ ವರ್ಗಗಳವರು ಇದ್ದಾರೆ ಇದರ ಪ್ರಮಾಣ ಏನಿದೆ ಎನ್ನುವುದನ್ನು ಗಣನೆಗೆ ತೆಗೆದುಕೊಂಡು ಒಂದು ಪಟ್ಟಿ ತಯಾರುಮಾಡಿ ಇವರ ಬಗ್ಗೆ ಯಾವ ರೀತಿ ಅನುಕೂಲ ಮಾಡಿಕೊಡಬಹುದು ಎನ್ನುವುದರ ಬಗ್ಗೆ ಸರಕಾರಕ್ಕೆ ಸೂಕ್ತವಾದ ಶಿಫಾರಸುಗಳನ್ನು ಕಳುಹಿಸಬಹುದು. ಇದರ ಬಗ್ಗೆ ಯಾವ ರೀತಿ ಪರಿಹಾರ ಕೊಡಬಹುದು ಎನ್ನುವುದನ್ನು ಸರಕಾರ ಆ ನಂತರ ಪರಿಶೀಲನೆ ಮಾಡಲು ಅನುಕೂಲವಾಗುತ್ತದೆ. ಹಾಗೇ ಈ ವರ್ಗದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನರಿದ್ದಾರೆ ಮತ್ತು ಅವಿದ್ಯಾವಂತ ನಿರುದ್ಯೋಗಿಗಳು ಎಷ್ಟು ಜನರಿದ್ದಾರೆ ಇವರುಗಳಿಗೆಲ್ಲಾ ಸರಕಾರ ಯಾವ ರೀತಿ ಸಹಾಯ ಸೌಲಭ್ಯಗಳನ್ನು ಮಾಡಬಹುದು ಎನ್ನುವುದರ ಬಗ್ಗೆ ಈ ಸಮಿತಿಯವರು ಗಮನ ಕೊಡುವುದು ಅಗತ್ಯ. ಈ ಸಮಿತಿಯನ್ನು ನೇಮಕ ಮಾಡಲು ಕಾರಣವೇನು ಎಂದರೆ ಈ ಹಿಂದುಳಿದ ವರ್ಗಗಳವರು ಯಾವ ರೀತಿಯಾಗಿ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ ಮತ್ತು ಇವರನ್ನು ಯಾವ ರೀತಿಯಾಗಿ ಸುಧಾರಿಸಬಹುದು ಎನ್ನುವುದರ ಬಗ್ಗೆ ಸರಿಯಾದ ಸಲಹೆಗಳನ್ನು ಪಡೆಯಬೇಕೆಂದು ಈ ಸಮಿತಿಯನ್ನು ನೇಮಕಮಾಡಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಇದರಲ್ಲಿ ಇನ್ನೊಂದು ಮುಖ್ಯವಾದ ಪ್ರಶ್ನೆ ಎಂದರೆ ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸ ಪಡೆದ ನಿರುದ್ಯೋಗ ವಿದ್ಯಾರ್ಥಿಗಳು ಇದ್ದಾರೆ. ಮತ್ತು ಪಟ್ಟಣಗಳಲ್ಲಿಯೂ ನಿರುದ್ಯೋಗ ವಿದ್ಯಾವಂತರುಗಳೂ ಇದ್ದಾರೆ. ಇದೊಂದು ದೊಡ್ಡ ಸಮಸ್ಯೆಯೇ ಆಗಿದೆ. ಇದಕ್ಕಾಗಿ ಹಳ್ಳಿಗಾಡಿನಲ್ಲಿರುವವರಿಗೆ ಭೂಮಿಗಳನ್ನು ಕೊಟ್ಟು ಸಹಾಯ ಮಾಡಿದರೆ ಅವರು ಅದರಿಂದ ಉಪಯೋಗ ಪಡೆಯಬಹುದು. ಪಟ್ಟಣಗಳಲ್ಲಿ ಕೆಲವು ಕಡೆ ಇರುವ ಕೈಗಾರಿಕೆ ಕಾರ್ಖಾನೆಗಳಲ್ಲಿ ಸ್ವಲ್ಪ ಜನರಿಗೆ ಕೆಲಸಗಳು ಸಿಕ್ಕಿವೆ ಮತ್ತು ರೋಡು ಟ್ರಾನ್ಸ್‌ಪೋರ್ಟು ಕಾರ್ಪೋರೇಷನ್ ಹಾಗೂ ಇನ್ನಿತರ ಕಡೆಗಳಲ್ಲಿ ಸ್ವಲ್ಪ ಜನಕ್ಕೆ ಕೆಲಸಗಳು ಸಿಕ್ಕಿರಬಹುದು. ಇದರಲ್ಲಿ ಒಂದು ದೊಡ್ಡ ಸಮಸ್ಯೆಯೇ ಬಂದಿದೆ. ಸ್ಕಿಲ್ಡ್ ವರ್ಕರ್ಸ್‌ಗಳು ಹಾಗೂ ಅನ್‌ಸ್ಕಿಲ್ಡ್ ವರ್ಕರುಗಳು ಎಂದು ಕೆಲವು ಕಡೆ ಇರುವ ಕಾರ್ಖಾನೆಗಳಲ್ಲಿ ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರೂ ಇನ್ನೂ ಬಹಳ ಜನರು ನಿರುದ್ಯೋಗಿಗಳಾಗಿರುವುದು ನಮಗೆ ಕಂಡುಬರುತ್ತಿದೆ. ಇದು ಒಂದು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಬಗ್ಗೆ ಈ ಸಮಿತಿಯಲ್ಲಿ ಅನುಭವಿಗಳಾದ ಶಾಸಕರು ಇರುವುದರಿಂದ ಇವರ ಬಗ್ಗೆ ಚರ್ಚೆ ಮಾಡಿ ಸೂಕ್ತವಾದ ಶಿಫಾರಸುಗಳನ್ನು ಸರಕಾರಕ್ಕೆ ಕಳುಹಿಸಿಕೊಟ್ಟರೆ ಇದರಮೇಲೆ ಸರಕಾರ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಅನುಕೂಲವಾಗಬಹುದು ಎಂದು ನಾನು ಭಾವಿಸಿದ್ದೇನೆ. ಇದಕ್ಕಾಗಿ ಈ ಸಮಿತಿಯವರು ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಪ್ರವಾಸಮಾಡಿ ಅಲ್ಲಲ್ಲಿ ಇರುವ ಅಗ್ರಿಕಲ್‌ಚರಲ್ ಕಾಲೋನಿಗಳು ಹಾಗೂ ಹೌಸಿಂಗು ಕಾಲೋನಿಗಳು ಯಾವ ರೀತಿ ಕೆಲಸ ಮಾಡುತ್ತಿವೆ ಮತ್ತು ಇಲ್ಲಿನ ಜನರಿಗೆ ಸರಕಾರ ಒದಗಿಸಿರುವ ಸಹಾಯಗಳು ಸರಿಯಾಗಿ ಉಪಯೋಗವಾಗುತ್ತಿವೆಯೋ, ಇಲ್ಲವೆ ಸರಕಾರದಿಂದ ಕೊಟ್ಟ ಸಹಾಯಗಳನ್ನು ದುರುಪಯೋಗಪಡಿಸಿದ್ದಾರೆಯೋ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಪರಿಶೀಲನೆಮಾಡಿ ಸರಕಾರಕ್ಕೆ ಸೂಕ್ತವಾದ ಸಲಹೆಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಸರಕಾರ ಸಮಿತಿಯವರ ವರದಿ ಬಂದಮೇಲೆ ಇವರಮೇಲೆ ಯಾವ ರೀತಿ ಮಾಡಲು ಸಾಧ್ಯ ಎನ್ನುವುದನ್ನು ಯೋಚನೆ ಮಾಡಲು ಅವಕಾಶವಾಗುತ್ತದೆ. ಟಿಬೇಟನ್ ಕಾಲೋನಿಯಲ್ಲಿ ಜಮೀನು ಇಲ್ಲದವರಿಗೆ ಭೂಮಿ ಕೊಟ್ಟು ಯಾವ ರೀತಿ ಅನುಕೂಲಗಳನ್ನು ಸರಕಾರದಿಂದ ಪಡೆಯುತ್ತಿದ್ದಾರೋ-ಅದೇ ರೀತಿಯಾಗಿ ಇತರ ಕಡೆಗಳಲ್ಲೂ ಲ್ಯಾಂಡ್‌ಲೆಸ್ ಲೇಬರುಗಳಿಗೆ ಅನುಕೂಲ ಮಾಡಿಕೊಡಬೇಕಾಗಿದೆ

ಇವರಿಗೆಲ್ಲಾ ಸಹಾಯ ಮಾಡಬೇಕಾದರೆ ಬ್ಯಾಂಕುಗಳವರು ಯಾವ ರೀತಿ ನೆರವಿಗೆ ಬರುತ್ತಾರೆ ಎನ್ನುವುದನ್ನೂ ಯೋಚನೆ ಮಾಡಬೇಕಾಗಿದೆ. ಇನ್ನು ನಮ್ಮ ಹಿಂದುಳಿದ ಜನರಾದ ಹರಿಜನರು ಬಹುವಾಗಿ ಚರ್ಮದ ಕೈಗಾರಿಕೆಯಲ್ಲಿ ನಿರತರಾಗಿದ್ದಾರೆ. ಇದಕ್ಕಾಗಿ ನಮ್ಮ ದೇಶದಲ್ಲಿ ಲೆದರ್ ಇಂಡಸ್ಟ್ರಿಯನ್ನು ಅಭಿವೃದ್ಧಿ ಮಾಡಿ ಈ ಜನಕ್ಕೆ ಕೆಲಸಗಳು ದೊರಕುವಂತೆ ಸಹಾಯ ಮಾಡಬಹುದು. ಇದರ ಬಗ್ಗೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನು ಸಮಿತಿಯವರು ಯೋಚನೆ ಮಾಡುವುದು ಆಗತ್ಯ. ಕೆಲವು ಯೋಜನೆಗಳಲ್ಲಿ ಕೆಲಸ ಮಾಡಬೇಕಾದರೆ ಬ್ಯಾಂಕುಗಳವರು ಸಹಾಯ ಮಾಡಿದರೆ ಇಂತಹ ಯೋಜನೆಗಳನ್ನು ಚೆನ್ನಾಗಿ ಮಾಡಬಹುದು. ಕೆಲವು ಯೋಜನೆಗಳನ್ನು ಮಾಡಿದ್ದರೂ ಅವುಗಳಿಂದ ಸೂಕ್ತವಾದ ಪ್ರತಿಫಲ ದೊರೆಯುತ್ತಿಲ್ಲ ಎನ್ನುವುದು ಕೇಳಿಬರುತ್ತಿದೆ. ಇದನ್ನು ಯಾವ ರೀತಿಯಾಗಿ ಪರಿಣಾಮಕರವಾಗಿ ಮಾಡಬಹುದು ಎನ್ನುವುದನ್ನು ಈ ಸಮಿತಿಯವರು ಚರ್ಚೆ ಮಾಡಿ ಎಷ್ಟುಮಟ್ಟಿಗೆ ಇವರಿಗೆ ಸಹಾಯ ಮಾಡಬಹುದು ಎನ್ನುವುದರ ಬಗ್ಗೆ ಸೂಕ್ತವಾದ ಸಲಹೆಗಳನ್ನು ಸಮಿತಿಯವರು ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ಈ ಸಮಿತಿಯಲ್ಲಿ ಅನುಭವವಿರುವ ಶಾಸಕರುಗಳು ಇರುವುದರಿಂದ ಇದರ ಬಗ್ಗೆ ಚೆನ್ನಾಗಿ ಚರ್ಚೆ ಮಾಡಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಾರೆ ಎಂದು ನನ್ನ ಭಾವನೆ. ಇದರ ಬಗ್ಗೆ ಸರಕಾರ ಯಾವ ರೀತಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಇದರಿಂದ ಎಷ್ಟುಮಟ್ಟಿನ ಫಲ ದೊರಕಿದೆ ಎನ್ನುವುದನ್ನೆಲ್ಲಾ ಕೂಲಂಕಷವಾಗಿ ಚರ್ಚೆ ಮಾಡಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಾರೆಂದು ಭಾವಿಸುತ್ತೇನೆ. ಇದಕ್ಕಾಗಿ ಈ ಸಮಿತಿಯವರು ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲೂ ಪ್ರವಾಸಮಾಡಿ ಹೌಸಿಂಗು ಕಾಲೋನಿಗಳು ಹಾಗೂ ಅಗ್ರಿಕಲ್‌ಚರು ಕಾಲೋನಿಗಳು ಇರುವ ಕಡೆಯಲ್ಲಿ ಅವನ್ನೆಲ್ಲಾ ಪರಿಶೀಲನೆ ಮಾಡಿ ಇದರ ಕೆಲಸಗಳು ಯಾವ ರೀತಿ ನಡೆಯುತ್ತಿವೆ ಎನ್ನುವುದನ್ನು ನೋಡಿಕೊಂಡು ಬಂದು ಅವನ್ನು ಸೂಕ್ತವಾಗಿ ಬದಲಾವಣೆ ಮಾಡಬೇಕಾದರೆ ಸರಿಯಾದ ಸಲಹೆಗಳನ್ನು ಕೊಡಬಹುದು. ಇಲ್ಲವೇ ಎಲ್ಲಿಯಾದರೂ ಸರಕಾರದಿಂದ ಕೊಟ್ಟಿರುವ ಹಣಸಹಾಯ ದುರುಪಯೋಗವಾಗಿದ್ದರೆ ಅವನ್ನು ದುರಸ್ತುಪಡಿಸುವುದು ಹೇಗೆ ಸಾಧ್ಯ ಎನ್ನುವುದರ ಬಗ್ಗೆ ಸರಿಯಾದ ಸಲಹೆಗಳನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಸಾಮಾನ್ಯವಾಗಿ ಈ ಸಮಿತಿಯಲ್ಲಿ ಅನುಭವಿಗಳೂ ಹಾಗೂ ಮೇಧಾವಿಗಳೂ ಆಗಿರುವ ಸದಸ್ಯರುಗಳು ಇರುವುದರಿಂದ ಇವರೆಲ್ಲರೂ ಉಪಯೋಗಕರವಾದ ಮತ್ತು ಪರಿಣಾಮಕರವಾದ ಕೆಲಸಗಳನ್ನು ಮಾಡಲು ದೇವರು ಇವರಿಗೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಎಂದು ಹಾರೈಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

SRI G. DUGGAPPA :—Hon'ble Speaker, Hon'ble Chief Minister, Chairman and members of the Committee, at the very outset I must express our gratitude to both the Hon'ble Speaker and the Hon'ble Chief Minister for having found time to come here to guide us about the working of the Committee. I thank the Hon'ble Chief Minister for his very sincere feelings and co-operation to the Committee. When this Committee was first thought of in the Parliament, we thought that it would be a onerous job. But by e kind suggestions made by the Hon'ble Speaker and the rances given by the Hon'ble Chief Minister, the task

of this Committee is lessened—so much so there will be no difficulty in the working of this Committee.

On behalf of this Committee, the Chairman and myself, I express our deep sense of gratitude to the Hon'ble Speaker, Hon'ble Chief Minister and the Hon'ble Minister for Agriculture, who is representing the Scheduled Caste people in the Cabinet.

I once again thank you all.

The Chairman suggested that the Development Commissioner may express his views in regard to the items of work that the committee could take up for consideration.

The Development Commissioner stated that the committee could take up for discussion the following subjects :—

(1) Employment problem;

(2) Land Grant rules ;

(3) Education;

(4) Enforcement of the Mysore Act;

(5) Housing Schemes.

Sri G. Duggappa stated that it would be very useful for the Members of the Committee to have copies of Reports of the Commissioner for Scheduled Castes and Scheduled Tribes, as also Reports like, Malkani's, Veerappa Committee, Nagan Gouda Committee, T. Nanjappa's Committee etc.

The Chairman stated as far as they are relevant to the work of the committee, they would be made available to the Members.

The Development Commissioner suggested instead of asking for copies of various Report, it would be better, if the material relevant to the present conditions were sought by the committee.

Sri V. S. Hiregoudar said that statistical data in respect of population of the Scheduled Castes and Scheduled Tribes may be furnished for the members use.

Sri M. H. Jayaprakash Narayan said that it would be better to take up for discussion the Education Department and problems relating to Scheduled Castes and Scheduled Tribes in that field.

The Development Commissioner stated that he would write to the D.P.I. informing him of the constitution of the Committee on Scheduled Castes and Scheduled Tribes and request him to give a brief report in respect of Educational facilities like fees, scholarships post-graduate courses, Government of India scholarships, Foreign Scholarships etc., provided for the Scheduled Castes and Scheduled Tribes.

Sri Tejsingh Rathod requested the Chairman to include the denotified tribes in addition to the Scheduled Castes and Scheduled Tribes and to examine the problems relating to the denotified tribes also.

The Chairman said that this committee was constituted to go into the question of welfare of Scheduled Castes and Scheduled Tribes only. How far this committee could go into the questions of welfare of other backward classes like denotified tribes was not clear to him. However, he assured the member, that he would try to clarify the position with the Hon. Speaker.

Sri M. H. Jayaprakash Narayan stated that the Reports of the Commissioner for S. C. and S. T. for the past 10 years may be made available to the members for their use.

The Committee agreed to take up " Education " during its next meeting, and thereafter to take up " Land Grant Rules " for discussion.

Sri M. H. Jayaprakash Narayan said that copies of circulars issued, from time to time, by the Government for the welfare of the S. C. and S. T. also should be made available to the Members.

The Development Commissioner suggested that the Legislature Secretariat may write to the Chief Secretary, D.P.I. and the Education Secretary informing them of the formation of this committee and request them to send some notes on educational facilities etc., provided by the Education Department and the Government for the welfare of the Scheduled Castes and Scheduled Tribes.

## Adoption of Rules for Internal Working of the Committee

The Rules of Procedure of the Committee on the Welfare of Scheduled Castes/Scheduled Tribes in respect of its *Internal Working* were approved by the Committee.

The meeting adjourned at 5-15 P.M.

WD 14041—GPE—400—5-3-1970